# ಶಬ್ದನಾದಲ್ಲಿ 'ಕುಮಾರವ್ಯಾಸನ ಭಾಷಾಂತರ' ಉಪನ್ಯಾಸ

'ಕುಮಾರವ್ಯಾಸನ ಭಾಷಾಂತರ' ಕುರಿತಾಗಿ ಡಾ. ಎಸ್.ಎನ್.ಶ್ರೀಧರ್ ವಿಶೇಷ ಉಪನ್ಯಾಸವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ 'ಶಬ್ದನಾ' ಆಯೋಜಿಸಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ವಾಂಸ, ಪ್ರಖ್ಯಾತ ಗಮಕ ವ್ಯಾಖ್ಯಾನಕಾರ ಡಾ. ಎ. ವಿ. ಪ್ರಸನ್ನ ಅವರು ವಹಿಸಲಿದ್ದಾರೆ.

ನ್ಯೂಯಾರ್ಕ್‌ನ ಸ್ಟೋನಿ ಬ್ರೂಕ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಆಗಿರುವ ಡಾ. ಎಸ್. ಎನ್. ಶ್ರೀಧರ್ ಅವರು ನಾರಾಯಣ ಮೂರ್ತಿ ಕ್ಲಾಸಿಕಲ್ ಲೈಬ್ರರಿ ಮಾಲಿಕೆಯಲ್ಲಿ ಕುಮಾರವ್ಯಾಸನನ್ನು ಇಂಗ್ಲಿಷಿಗೆ ಅನುವಾದಿಸುತ್ತಿರುವ ವಿದ್ವಾಂಸರಲ್ಲೊಬ್ಬರು.

ಕುಮಾರವ್ಯಾಸನ ಪ್ರಸಿದ್ಧ ಕೃತಿ 'ಕುಮಾರವ್ಯಾಸ ಭಾರತ'. ಇದು ವ್ಯಾಸರು ಸಂಸ್ಕೃತದಲ್ಲಿ ಬರೆದ ಮಹಾಭಾರತ ಕೃತಿಯ ಕನ್ನಡ ಅನುವಾದ. ಇದೀಗ ಈ ಕೃತಿ ಇಂಗ್ಲಿಷ್ ಅನುವಾದಗಳ ಮೂಲಕ ಕನ್ನಡದಿಂದ ಹೊರಲೋಕಕ್ಕೆ ಹೊಸದಾಗಿ ಕುಮಾರವ್ಯಾಸನ ಪರಿಚಯವಾಗಲಿದೆ. ಶಾಸ್ತ್ರೀಯ ಕೃತಿಗಳ ಅನುವಾದಗಳಿಗೆ ಮೀಸಲಾದ ಶಬ್ದನಾ ಹೊಸ ಅನುವಾದಗಳ ಹಿಂದಿನ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪ್ರಭಾವಗಳನ್ನು ವಿಶೇಷ ಉಪನ್ಯಾಸಗಳ ಮೂಲಕ ಚರ್ಚಿಸುತ್ತಿದೆ.

ಸ್ಥಳ–ಕಾನ್ಫರೆನ್ಸ್ ಹಾಲ್, ಅಂಬೇಡ್ಕರ್ ವೀಧಿಯ (ಸೆಂಟ್ರಲ್ ಕಾಲೇಜು ಆವರಣ) ಕೇಂದ್ರ ಸಾಹಿತ್ಯ ಅಕಾದೆಮಿಯ ದಕ್ಷಿಣ ಪ್ರಾದೇಶಿಕ ಕಚೇರಿ. ಶುಕ್ರವಾರ ಸಂಜೆ 5